**ಚಿತ್ರಪಟ ಕಥನ**

# ಮೊಗೆದಷ್ಟೂ ಮೋಹಕ ರೋಚಕ




**ಕರ್ನಾಟಕದ ಮೋಹನ್ ಥಾಮಸ್ ಅವರು ವನ್ಯಜೀವಿ ಛಾಯಾಗ್ರಹಣದ ವಿಶ್ವನಕಾಶೆಯಲ್ಲಿ ಗುರ್ತಿಸಿಕೊಂಡಿರುವ ಹೆಸರು. ಸಿವಿಲ್ ಇಂಜಿನಿಯರಿಂಗ್ ಕಲಿತು, ವನ್ಯಜೀವಿಗಳ ಬಗ್ಗೆ ಆಸಕ್ತಿ ಮೊಳೆತು, ವಿಶ್ವದ ಪ್ರಸಿದ್ಧ ಕಾಡುಗಳಲ್ಲಿ ಮೋಹನ್ ಅಲೆದಿದ್ದಾರೆ. ಈ ಅಲೆಮಾರಿ ಬಿಂಬಗ್ರಾಹಿಯ ಸಾಧನೆಯ ಹಾದಿಯನ್ನು ಪರಿಚಯಿಸುವ ಈ ಬರಹ, ವನ್ಯಜೀವಿಗಳ ಬಗೆಗೂ ಅರಿವು ಮೂಡಿಸುವಂತಹದ್ದು.**

■ ಸಂದರ್ಶನ ಲೇಖನ: **ಎಂ. ಆರ್. ಭಗವತಿ**

ಆತ್ಮೀಯ ಬಳಗದಲ್ಲಿ 'ಲೆಪರ್ಡ್ ಮ್ಯಾನ್' ಎಂದು ಪ್ರಖ್ಯಾತರಾದ ಮೋಹನ್ ಥಾಮಸ್ ಅವರದು ವನ್ಯಜೀವಿ ಛಾಯಾಗ್ರಹಣದಲ್ಲಿ ಚಿರಪರಿಚಿತ ಹೆಸರು. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆಗಿ ಹಲವಾರು ವರ್ಷಗಳ ಕಾಲ ದುಡಿದಿರುವ ಅವರು, ವೃತ್ತಿ ಜೀವನದ ಕೆಲಸದ ಒತ್ತಡಗಳಿಂದ ಸ್ವಲ್ಪ ಬಿಡುವು ದೊರೆತ ಮೇಲೆ ವನ್ಯಜೀವಿ ಛಾಯಾಗ್ರಹಣದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡವರು. ಅವರಿಗೆ ನಲವತ್ತನೇ ವಯಸ್ಸಿನಲ್ಲಿ ಒಲಿದು ಬಂದ ಪ್ರವೃತ್ತಿ ವನ್ಯಜೀವಿ ಛಾಯಾಗ್ರಹಣ.

ಚಿಕ್ಕಂದಿನಿಂದಲೂ ವನ್ಯಜೀವಿ ಛಾಯಾಗ್ರಹಣದಲ್ಲಿ ಆಸಕ್ತಿಯೇನೋ ಇತ್ತು. ಮನಸ್ಸಿನೊಳಗೆ ಸುಪ್ತವಾಗಿದ್ದ ಆಸಕ್ತಿಗೆ ಕಾಲ ಕೂಡಿ ಬಂದದ್ದು ಬಿಳಿಗಿರಿರಂಗನ ಬೆಟ್ಟದಲ್ಲಿ. ಆಗ ಕೈಯಲ್ಲಿ ಇದ್ದದ್ದು ಸೋನಿ ಸೈಬರ್ ಶಾಟ್ ಕ್ಯಾಮೆರಾ. ಮೊದಲ ಬಾರಿಗೆ ಸಫಾರಿಗೆ ಹೋದಾಗ ಆನೆಗಳ ಹಿಂಡು ಅಟ್ಟಿಸಿಕೊಂಡು ಬಂದಿತ್ತು. ಆಗ, ಇವರನ್ನು ಸಫಾರಿಗೆ ಕರೆದುಕೊಂಡು ಹೋದ ಸ್ನೇಹಿತರ ಕುಟುಂಬ ಮತ್ತೆಂದೂ ಸಫಾರಿಯ ಮುಖ ನೋಡಲಿಲ್ಲ! ಆದರೆ, ಮೋಹನ್ ಅವರು ಮಾತ್ರ ಕಾಡು ಮತ್ತು ಕಾಡುಪ್ರಾಣಿಗಳ ಗುಂಗಿನಿಂದ ಹೊರಬಂದಿಲ್ಲ.

### ಹುಲಿ ಬಂತು ಹುಲಿ

ಹುಲಿಯ ಚಿತ್ರವನ್ನು ಸೆರೆಹಿಡಿಯುವ ಮೋಹನ್ ಅವರ ಆಸೆ ಹನ್ನೆರಡು ವರ್ಷಗಳ ಕಾಲ ಕೈಗೂಡಿರಲಿಲ್ಲ. ಹುಲಿಯನ್ನು ಅದರ ವಾಸಸ್ಥಾನದಲ್ಲಿ ನೋಡಲಾರೆನೇನೊ ಎನ್ನುವ ನಿರಾಸೆ ಅವರನ್ನು ಕಾಡಿದ್ದೂ ಇದೆ. ಆಗಿನ ದಿನಗಳಲ್ಲಿ ಹುಲಿಗಳನ್ನು ನೋಡುವುದು ಈಗಿನಷ್ಟು ಸುಲಭವಾಗಿರಲಿಲ್ಲ ಮತ್ತು ಈಗಿನಂತೆ ಕೇವಲ ಛಾಯಾಚಿತ್ರ ತೆಗೆಯುವುದೊಂದೇ ಪ್ರಮುಖ ಆಸಕ್ತಿಯಾಗಿರಲಿಲ್ಲ. ಕಾಡಿಗೆ ಹೋಗುವುದು, ಗಮನಿಸುವುದು, ಪ್ರಕೃತಿಯಲ್ಲಿ




ಲೀನವಾಗುವುದು ಎಲ್ಲವೂ ಆ ಪಯಣದಲ್ಲಿ ಸೇರಿರುತ್ತಿತ್ತು.

ಬಂಡೀಪುರಕ್ಕೆ ಮೊದಲ ಬಾರಿಗೆ ಹೋದಾಗ ಹುಲಿಯನ್ನು ಕಂಡರೂ ಅವರಿಗೆ ಫೋಟೊ ತೆಗೆಯಲಾಗಿರಲಿಲ್ಲ. ಯಾವುದೋ ಸಾಕ್ಷ್ಯಚಿತ್ರದಲ್ಲಿ ಹುಲಿಯನ್ನು ನೋಡುತ್ತಿರುವ ಅನುಭವ. ಅದು ಸುಮಾರು ಹೊತ್ತು ಇವರೆದುರು ಕಾಣಿಸಿಕೊಂಡರೂ ಚಿತ್ರವನ್ನು ಮಾತ್ರ ತೆಗೆಯಲಾಗಲಿಲ್ಲ. ನಡುಗುವ ಕೈಗಳಿಂದ ಚಿತ್ರ ತೆಗೆಯುವುದು ಹೇಗೆ? ಅಷ್ಟು ಜೋರು ನಡುಕ. ಪ್ರತಿಯೊಬ್ಬ ಉತ್ಸಾಹಿ ವನ್ಯಜೀವಿ ಛಾಯಾಗ್ರಾಹಕರಿಗೆ ಪ್ರಾರಂಭದಲ್ಲಿ ವನ್ಯಜೀವಿಗಳನ್ನು ಕಂಡಾಗ ಆಗುವ ಸಾಮಾನ್ಯ ಅನುಭವ ಅದು. ಭಾವೋದ್ರೇಕಕ್ಕೆ ಒಳಗಾಗುವುದು, ಇಡೀ ಮೈ ನಡುಗುವುದು ಬಹುಜನರ ಅನುಭವ.

ನಂತರ ಸಫಾರಿಗೆ ಹೋದ ಕಡೆಗಳಲ್ಲೆಲ್ಲಾ ಹುಲಿಗಳನ್ನು ನೋಡಿದ್ದಾರೆ. ಇನ್ನೂರಕ್ಕೂ ಹೆಚ್ಚು ಹುಲಿಯ ಚಿತ್ರಗಳನ್ನು ಸೆರೆಹಿಡಿದ್ದಾರೆ. ಬಂಗಾಳದ ಸುಂದರಬನ ಮತ್ತು ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನಗಳಿಂದ ಹಿಡಿದು, ಕರ್ನಾಟಕದ ಬಂಡೀಪುರ ಕಾಡಿನವರೆಗೂ ಬಹಳಷ್ಟು ಹುಲಿಗಳನ್ನು ನೋಡಿ, ಕ್ಯಾಮೆರಾದಲ್ಲಿ ದಾಖಲಿಸಿದ್ದಾರೆ. ಹಲವಾರು ವರ್ಷಗಳ ಕಾಲ